## ಪ್ರಾರ್ಥನೆ

# ವೇದಮಂತ್ರಗಳಿಂದ

ಓಂ ಆಪ್ಯಾಯಂತು ಮಮಾಂಗಾನಿ ವಾಕ್ ಪ್ರಾಣಶ್ಚಕ್ಷುಃ
ಶ್ರೋತ್ರಮಥೋ ಬಲಮಿಂದ್ರಿಯಾಣಿ ಚ ಸರ್ವಾಣಿ
ಸರ್ವಂ ಬ್ರಹ್ಮೋಪನಿಷದಂ ಮಾಽಹಂ ಬ್ರಹ್ಮ ನಿರಾಕುರ್ಯಾಂ ।
ಮಾ ಮಾ ಬ್ರಹ್ಮ ನಿರಾಕರೋದನಿರಾಕರಣಮಸ್ತ್ವನಿರಾಕರಣಂ
ಮೇಽಸ್ತು ತದಾತ್ಮನಿ ನಿರತೇ ಯ ಉಪನಿಷತ್ಸು
ಧರ್ಮಾಸ್ತೇ ಮಯಿ ಸಂತು ತೇ ಮಯಿ ಸಂತು ॥
ಓಂ ಶಾಂತಿಃ ಶಾಂತಿಃ ಶಾಂತಿಃ

ಓಂ. ನನ್ನ ಅವಯವಗಳೂ ವಾಕ್ಕೂ ಪ್ರಾಣವೂ ಚಕ್ಷುಸ್ಸೂ ಶ್ರೋತ್ರವೂ ಬಲವೂ ಮತ್ತು ಎಲ್ಲ ಇಂದ್ರಿಯಗಳೂ ಪುಷ್ಟಿಯನ್ನು ಹೊಂದಲಿ. ಎಲ್ಲವೂ ಉಪನಿಷತ್ ಪ್ರತಿಪಾದ್ಯನಾದ ಬ್ರಹ್ಮವೇ. ನಾನು ಬ್ರಹ್ಮವನ್ನು ನಿರಾಕರಿಸದಿರಲಿ, ಬ್ರಹ್ಮವು ನನ್ನನ್ನು ನಿರಾಕರಿಸದಿರಲಿ. ನಿರಾಕರಣವೇ ಇಲ್ಲದಿರಲಿ; ನನ್ನಿಂದಲೂ ನಿರಾಕರಣವಿಲ್ಲದಿರಲಿ. ಉಪನಿಷತ್ತುಗಳಲ್ಲಿ ಉಕ್ತವಾದ ಧರ್ಮಗಳು ಆತ್ಮನಿರತನಾದ ನನ್ನಲ್ಲಿ ಇರಲಿ, ಅವು ನನ್ನಲ್ಲಿರಲಿ.
ಓಂ ಶಾಂತಿಃ ಶಾಂತಿಃ ಶಾಂತಿಃ

ಓಂ ವಾಙ್ ಮೇ ಮನಸಿ ಪ್ರತಿಷ್ಠಿತಾ ಮನೋ ಮೇ ವಾಚಿ ಪ್ರತಿಷ್ಠಿತ
ಮಾವಿರಾವೀರ್ಮ ಏಧಿ; ವೇದಸ್ಯ ಮ ಆಣೀಸ್ಥಃ; ಶ್ರುತಂ ಮೇ
ಮಾ ಪ್ರಹಾಸೀರನೇನಾಹೋರಾತ್ರಾನ್ ಸಂದಧಾಮಿ; ಋತಂ
ವದಿಷ್ಯಾಮಿ, ಸತ್ಯಂ ವದಿಷ್ಯಾಮಿ; ತನ್ಮಾಮವತು, ತದ್ವಕ್ತಾರಮವತು;
ಅವತು ಮಾಮವತು ವಕ್ತಾರಮ್, ಅವತು ವಕ್ತಾರಮ್ ॥
ಓಂ ಶಾಂತಿಃ ಶಾಂತಿಃ ಶಾಂತಿಃ

ನನ್ನ ವಾಕ್ಕು ಮನಸ್ಸಿನಲ್ಲಿ ಪ್ರತಿಷ್ಠಿತವಾಗಲಿ, ನನ್ನ ಮನಸ್ಸು ವಾಕ್ಕಿನಲ್ಲಿ ಪ್ರತಿಷ್ಠಿತವಾಗಲಿ. ಹೇ ಸ್ವಪ್ರಕಾಶವಾದ ಬ್ರಹ್ಮವೇ, ನನಗೆ ಪ್ರತ್ಯಕ್ಷವಾಗು. (ಹೇ ವಾಙ್ಮನಸ್ಸುಗಳೇ), ನನಗೆ ವೇದಾರ್ಥವನ್ನು ತಂದುಕೊಡಲು ಸಮರ್ಥರಾಗಿ. ನಾನು ಕಲಿತ ವೇದವು ನನ್ನನ್ನು ಬಿಡದಿರಲಿ. ಈ ಅಧ್ಯಯನದಿಂದ ಅಹೋರಾತ್ರಿಗಳನ್ನು ಸಂಯೋಜಿಸುತ್ತೇನೆ. ಋತವನ್ನು ಹೇಳುತ್ತೇನೆ, ಸತ್ಯವನ್ನು ಹೇಳುತ್ತೇನೆ. ಬ್ರಹ್ಮವು ನನ್ನನ್ನು ಕಾಪಾಡಲಿ; ಅದು ಆಚಾರ್ಯನನ್ನು ಕಾಪಾಡಲಿ. ಓಂ ಶಾಂತಿಃ ಶಾಂತಿಃ ಶಾಂತಿಃ

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ
ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ । ಸ್ಥಿರೈರಂಗೈಸ್ತುಷ್ಟುವಾಂಸಸ್ತನೂಭಿ–
ರ್ವ್ಯಶೇಮ ದೇವಹಿತಂ ಯದಾಯುಃ॥ ಓಂ ಶಾಂತಿಃ ಶಾಂತಿಃ ಶಾಂತಿಃ

ಹೇ ದೇವತೆಗಳೇ, ಮಂಗಳವಾದುದನ್ನು ಕಿವಿಗಳಿಂದ ಕೇಳೋಣ; ಹೇ ಪೂಜಾರ್ಹರೇ, ಪವಿತ್ರವಾದುದನ್ನು ಕಣ್ಣುಗಳಿಂದ ನೋಡೋಣ; ದೃಢವಾದ ಅವಯವಗಳಿಂದಲೂ ಮತ್ತು ಶರೀರಗಳಿಂದಲೂ ಕೂಡಿ, (ನಿಮ್ಮನ್ನು) ಸ್ತುತಿಸುವವರಾಗಿ ದೇವನಿಂದ ವಿಧಿಸಲ್ಪಟ್ಟ (ಪೂರ್ಣವಾದ) ಆಯುಸ್ಸನ್ನು ಹೊಂದೋಣ!
ಓಂ ಶಾಂತಿಃ ಶಾಂತಿಃ ಶಾಂತಿಃ

## ಸೂಕ್ತಿಪ್ರಭ

# ಶಾಂತಿ

'*ಭಗವಂತ ಅಲ್ಲಿದ್ದಾನೆ*' ಎಂದು ಎಲ್ಲಿಯವರೆಗೆ ಚಿಂತಿಸುವೆಯೋ ಅಲ್ಲಿಯ ತನಕ ನಿನಗೆ ಶಾಂತಿ ದೊರಕದು. '*ಭಗವಂತ ಇಲ್ಲಿಯೇ ಇದ್ದಾನೆ*' ಎಂದು ಯಾವಾಗ ತಿಳಿದುಕೊಂಡು ಭಾವಿಸುವೆಯೋ ಆಗ ನೀನು ಶಾಂತಿಯನ್ನು ಕಂಡುಕೊಳ್ಳುತ್ತೀಯೆ. – *ಸ್ವಾಮಿ ಬ್ರಹ್ಮಾನಂದ*

ಭೋಗಗಳತ್ತ ಧಾವಿಸುವ ಜನರು ಎಂದಿಗೂ ಶಾಂತಿಯನ್ನು ಹೊಂದುವುದಿಲ್ಲ. ಎಲ್ಲ ಬಗೆಯ ಆಶೆಗಳನ್ನು ತ್ಯಜಿಸಿ, ನಿಸ್ಪೃಹ, ನಿರಹಂಕಾರಿ ಮತ್ತು ನಿರಾಸಕ್ತನಾಗುವವನಿಗೆ ಮಾತ್ರ ನಿಜವಾದ ಶಾಂತಿ ದೊರೆಯುತ್ತದೆ. –*ಸ್ವಾಮಿ ಶಿವಾನಂದ*

ಭಗವದ್ಭಕ್ತಿಯಿಲ್ಲದೆಯೇ ಶಾಂತಿ ಸಿಕ್ಕುವುದಿಲ್ಲ. ಭೌತಿಕ ಸಂಪತ್ತು ಮನುಷ್ಯನನ್ನು ಸಂತುಷ್ಟನನ್ನಾಗಲೀ ಶಾಂತಿಯುತನನ್ನಾಗಲೀ ಮಾಡುವುದಿಲ್ಲ. –*ಸ್ವಾಮಿ ಪ್ರೇಮಾನಂದ*

ನಾವು ಭಗವಂತನಿಗೆ ಶರಣಾದಾಗ, ಸಂಪೂರ್ಣ ಶಾಂತಿಯನ್ನು ಹೊಂದಬಹುದು. ಆಗ ಅವನು ಯಾವುದನ್ನು ಒಳ್ಳೆಯದೆಂದು ಪರಿಗಣಿಸುತ್ತಾನೋ ಅದನ್ನು ಮಾಡಲಿ ಎಂಬ ಭಾವ ಬರುತ್ತದೆ. –*ಸ್ವಾಮಿ ತುರೀಯಾನಂದ*

ನೀವು ಭಗವಂತನಿಗೆ ಸಂಪೂರ್ಣ ಶರಣಾದರೆ, ಮುಕ್ತಿ ನಿಮ್ಮದಾಗುವುದು.. ಆಗ ನಿಮ್ಮ ತುಟಿಗಳಲ್ಲಿ ನಗು ನಲಿಯುತ್ತಿರುತ್ತದೆ, ನಿಮ್ಮ ಮುಖ ಬೆಳಗುತ್ತಿರುತ್ತದೆ ಮತ್ತು ನಿಮ್ಮ ಮನಸ್ಸು ಉದ್ರೇಕರಹಿತವೂ ಪ್ರಶಾಂತವೂ ಆಗಿರುತ್ತದೆ. –*ಸ್ವಾಮಿ ರಾಮಕೃಷ್ಣಾನಂದ*

ಇಲ್ಲಿ ಯಾವ ಸಂತೋಷವೂ ಇಲ್ಲ, ಶಾಂತಿಯೂ ಇಲ್ಲ; ಅದು ಇರುವುದಕ್ಕಾದರೂ ಹೇಗೆ ಸಾಧ್ಯ? ಇದು ನಿಮ್ಮ ನಮ್ಮ ಜಾಗವಲ್ಲ. ಈ ಸಂಕುಚಿತ, ಸ್ವಾರ್ಥ– ಇವೆಲ್ಲ ನಮ್ಮವಲ್ಲ. ಇವುಗಳೆಲ್ಲದರಿಂದ ನಾವು ಬಿಡುಗಡೆಯನ್ನು ಬಯಸುತ್ತೇವೆ. ಇದೇ ನಿಜವಾದ ಸಂತೋಷ, ಇದೇ ನಿಜವಾದ ತೃಪ್ತಿ. ಇದೇ ನಿಜವಾದ ಶಾಂತಿ ಮತ್ತು ಆನಂದ. –*ಸ್ವಾಮಿ ಅಖಂಡಾನಂದ*

ಜನರು ಶಾಂತಿಯನ್ನು ಏಕೆ ಕಳೆದುಕೊಳ್ಳುತ್ತಾರೆ? ಕೆಟ್ಟ ಯೋಚನೆಗಳನ್ನು ಮಾಡುವವನು, ಕೆಟ್ಟ ಮಾತುಗಳನ್ನು ಆಡುವವನು, ದಿನಾರಾತ್ರಿ ಕೇವಲ ಕ್ಷುಲ್ಲಕ ವ್ಯವಹಾರಗಳಿಂದ ಮನಸ್ಸನ್ನು ತುಂಬಿಕೊಂಡಿರುವವನು ಶಾಂತಿಯನ್ನು ಪಡೆಯುವುದಾದರೂ ಹೇಗೆ? –*ಸ್ವಾಮಿ ಸುಬೋಧಾನಂದ*

ಭಗವಂತನ ನಾಮವನ್ನು ಉಚ್ಚರಿಸು, ಆಗ ಶಾಂತಿ ನಿನ್ನದಾಗುವುದು – *ಸ್ವಾಮಿ ವಿಜ್ಞಾನಾನಂದ*

ಭಗವಂತನ ಇಚ್ಛೆಯಲ್ಲಿಯೇ ನಮ್ಮ ಶಾಂತಿ ಇರುವದು. –*ಡಾಂಟೆ*

ಭಗವಂತನಿಂದ ಪಡೆಯುವ ಶಾಂತಿ ಎಲ್ಲ ತಿಳುವಳಿಕೆಯನ್ನೂ ಮೀರಿ ನಿಲ್ಲುತ್ತದೆ. – *ಬೈಬಲ್*

ಅಕ್ಷೋಭೆಯ ಸ್ಥಿತಿಯಲ್ಲಿನ ಸ್ವಾತಂತ್ರ್ಯವೇ ಶಾಂತಿ. –*ಸಿಸಿರೋ*